ದಿನಾಂಕ 06 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :</u> ವಾದಿ ಪರ ವಕೀಲರಿಂದಃ-

ನಾನು ಬಿ. ಎ. ಪದವೀಧರ. ಪ್ರತಿವಾದಿ 1, 4, 6 ನನ್ನ ಸಹೋದರರು. ಪ್ರತಿವಾದಿ 3 ನನ್ನ ಮಗ. ನಾನು ಹೇಳಿದಂತೆ ನನ್ನ ವಕೀಲರು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಯಾರು ಮಾಡಿದ್ದಾರೆ. ಸಾರ್ವಜನಿಕ ರಸ್ತೆ ಬಗ್ಗೆ ಈ ದಾವೆ ಸಲ್ಲಿಸಿದ್ದಾರೆ. ಯಾವ ಸರ್ವೆ ನಂ ಆಸ್ತಿಗೆ ಸಂಬಂಧಪಟ್ಟ ಹಾಗೆ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ಮತ್ತು 3 ರಿಂದ 8 ನೇ ಪ್ರತಿವಾದಿಯರು ನನಗೆ ಈ ದಾವೆಯನ್ನು ಸಾಕ್ಷಿ ನುಡಿಯಲು ಬರವಣಿಗೆಯಲ್ಲಿ ಅನುಮತಿ ನೀಡಿಲ್ಲ ಎನ್ನುತ್ತಾರೆ. ರಸ್ತೆ ನಮಗೆ ಸಂಬಂಧಪಟ್ಟಿದ್ದಾದ ಕಾರಣ ನಾನೇ ದಾವೆಯಲ್ಲಿ ಸ್ವಯಂ ಆಗಿ ಸಾಕ್ಷಿ ನುಡಿಯುತ್ತಿದ್ದೇನೆ.

ವಾದಿ ನನಗೆ ಪರಿಚಯ. ಅವರು ನಮ್ಮ ಊರಿನವರು ಹಾಗೂ ಪಕ್ಕದ ಮನೆಯವರು. ನಮ್ಮ ಹಾಗೂ ವಾದಿಯವರ ನಡುವೆ ಆಸ್ತಿ ಅಕ್ಕಪಕ್ಕದಲ್ಲಿದೆ. ನನಗೆ ನಿಟ್ಟೂರು ಗ್ರಾಮದ ಸರ್ವೆ ನಂ 57/2 ರಲ್ಲಿ ಆಸ್ತಿ ನನಗೆ ಇಲ್ಲ. ವಿನೇಶ್ ರವರಿಗೆ ಸರ್ವೆ ನಂ 57/1 ರಲ್ಲಿ ಆಸ್ತಿ ಇರಬಹುದು ನಾನು ನೋಡಿಲ್ಲ ಎನ್ನುತ್ತಾರೆ. ನನ್ನ ಹಾಗೂ ವಾದಿಯವರ ಆಸ್ತಿಯ ಪಕ್ಕಪಕ್ಕದಲ್ಲಿದೆ ಆದರೆ ಸರ್ವೆ ನಂ ನನಗೆ ಗೊತ್ತಿಲ್ಲ. ವಾದಿಯ ಸ್ವಾ ಧೀನದಲ್ಲಿ ಗದ್ದೆ ಹಾಗೂ ಕಾಫಿ ತೋಟ ಇದೆ ಎಂದರೆ ಇರಬಹುದು ಎನ್ನುತ್ತಾರೆ. ವಾದಿಯವರಿಗೆ ಸರ್ವೆ ನಂ 77/5 ರಲ್ಲಿ 90 ಸೆಂಟ್, ಸರ್ವೆ ನಂ 77/21 ಬಿ ರಲ್ಲಿ 1 ಎಕರೆ , ಸರ್ವೆ ನಂ 77/22 ರಲ್ಲಿ 1 ಎಕರೆ 32 ಸೆಂಟ್, ಸರ್ವೆ ನಂ 57/1 ರಲ್ಲಿ 2 ಎಕರೆ 22 ಸೆಂಟ್, ಆಸ್ತಿಯಲ್ಲಿ ಸ್ವಾಧೀನ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ಎಲ್ಲ ವಿಚಾರ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೂ ಹಾಗೂ ವಾದಿಯ ನಡುವೆ ಈ ದಾವೆ ಹೊರತುಪಡಿಸಿ ಮತ್ತೊಂದು ದಾವೆ ಬಾಕಿ ಇದೆ ಎನ್ನುತ್ತಾರೆ. ವಾದಿಯವರು ನನ್ನ ಮೇಲೆ ಇತರೆ 3 ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಗೂ ವಾದಿಯವರ ನಡುವೆ ಮಾತುಕತೆ ಇಲ್ಲ ಎಂದರೆ ಸರಿ. ನಮ್ಮ ಮತ್ತು ವಾದಿ ನಡುವೆ ರಸ್ತೆ ವಿಚಾರವಾಗಿ ನಿಷ್ಟುರ ಇದೆ ಆಸ್ತಿ ವಿಚಾರದಲ್ಲಿ ನಿಷ್ಟುರ ಇಲ್ಲ ಎನ್ನುತ್ತಾರೆ. ಆಸ್ತಿ ವಿಚಾರದಲ್ಲಿ ನನ್ನ ಮತ್ತು ವಾದಿ ನಡುವೆ ನಿಷ್ಟುರ ಇದೆ ಎಂದರೆ ಸರಿಯಲ್ಲ.

ಮಾಪಂಗಡ ದೇವಯ್ಯ ನನಗೆ ಪರಿಚಯ. ಅವರು ನಮ್ಮ ನೆರಮನೆಯವರು ಅದರೆ ಸ್ನೇಹಿತರು ಅಲ್ಲ, ನನ್ನ ಹಾಗೂ ಮಾಪಂಗಡ ದೇವಯ್ಯ ನಡುವೆ ಸಂಬಂಧ ಚೆನ್ನಾಗಿದೆ. ಮಾಪಂಗಡ ದೇವಯ್ಯ ಹಾಗೂ ವಾದಿಯವರಿಗೆ ಆಸ್ತಿ ವಿಚಾರದಲ್ಲಿ ಹಲವು ದಾವೆಗಳು ಹಾಗೂ ಕ್ರಿಮಿನಲ್ ಪ್ರಕರಣಗಳು ಬಾಕಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರಗಳ ಬಗ್ಗೆ ನನಗೆ ತಿಳಿದಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಪಂಗಡ ದೇವಯ್ಯರವರು, ವಾದಿಯವರ ವಿರುದ್ದ ದಾಖಲಿಸಿರು 3 ಕ್ರಿಮಿನಲ್ ಪ್ರಕರಣಗಳಲ್ಲಿ ನಾನು ನನ್ನ ಮಗು ಹಾಗೂ ಸಹೋದರರು ಸಾಕ್ಷಿದಾರರಾಗಿದ್ದೇವೆ ಎಂದರೆ ಸರಿ. ಸದರಿ ಪ್ರಕರಣಗಳಲ್ಲಿ ನಾನು ಮಾಪಂಗಡ ದೇವಯ್ಯ ಕರೆದ ಮೇರೆಗೆ ಸಾಕ್ಷಿದಾರನಾಗಿದ್ದೇನೆ ಎಂದರೆ ಸರಿಯಲ್ಲ. ನಾನು ನೋಡಿದ ವಿಚಾರ ಹೇಳಲು ಸಾಕ್ಷಿದಾರನಾಗಿದ್ದೇನೆ ಎನ್ನುತ್ತಾರೆ.

ನಾನು ಮತ್ತು ಮಾಪಂಗಡ ದೇವಯ್ಯ ಸ್ನೇಹಿತರಾದ ಕಾರಣ ವಾದಿಯವರ ವಿರುದ್ದ ದಾಖಲಾದ ಎಲ್ಲ ಪ್ರಕರಣಗಳಲ್ಲಿ ಸಾಕ್ಷಿದಾರನಾಗಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 77/17 ರಲ್ಲಿ ನನಗೆ 7 ಎಕರೆ ಚಿಲ್ಲರೆ ಆಸ್ತಿ ಇದೆ, ಅದರಲ್ಲಿ ನಮ್ಮ ಮನೆ ಸಹ ಇದೆ. ಸರ್ವೆ ನಂ 77/17 ರ ಪಕ್ಕದಲ್ಲಿ ಸರ್ವೆ ನಂ 77/16 ಪೈಸಾರಿ ಸರ್ಕಾರಿ ಕೆರೆ ಇದೆ ಎಂದರೆ ಸರಿ. ನಿಟ್ಟೂರು ಗ್ರಾಮದ ನಕಾಶೆಯನ್ನು ನೋಡಿದ್ದೇನೆ. ಸರ್ವೆ ನಂ 77/15 ನನ್ನ ಅಣ್ಣ ಅಂದರೆ ಪ್ರತಿವಾದಿ 1 ರವರಿಗೆ ಸೇರಿದ್ದಾಗಿರುತ್ತದೆ. ಸರ್ವೆ ನಂ 77/14 ಯಾರಿಗೆ ಸೇರಿದ್ದು ನನಗೆ ಗೊತ್ತಿಲ್ಲ, ದಾಖಲಾತಿ ನೋಡಿ ಹೇಳಬೇಕು ಎನ್ನುತ್ತಾರೆ. ಸರ್ವೆ ನಂ 77/14 6 ನೇ ಪ್ರತಿವಾದಿ ಹೆಸರಿಲ್ಲಿದೆ, ಸದರಿ ವಿಚಾರ ನನಗೆ ತಿಳಿದಿದೆ ಆದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮಲ್ಚೀರ ಕುಟುಂಬ ಆಸ್ತಿಯ ನಂತರ ಬಾಳೆಲೆ, ಕಾರ್ಮಾಡು ಮುಖ್ಯ ರಸ್ತೆಯ ಕಡೆಗೆ ಚೀರಂಡ ಕುಟುಂಬದ ಆಸ್ತಿ ಇದೆ ಎಂದರೆ ಸರಿ. ಚೀರಂಡ ಕುಟುಂಬದವರು ಈಗಲೂ ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ಗ್ರಾಮ ನಕಾಶೆ ಪ್ರಕಾರ ಸರ್ವೆ ನಂ 99 ರಲ್ಲಿ ಕಡಂಗ ಇದೆ ಆದರೆ ಎಷ್ಟು ಎಕರೆ ಎಂದು ಹೇಳಲಾಗುವುದಿಲ್ಲ, ಸುಮಾರು 1 ಕಿ. ಮೀ ಉದ್ದದಷ್ಟು ಕಡಂಗ ಇದೆ. ಸರ್ವೆ ನಂ 99 ರ ಕಡಂಗ ಬಾಳೆಲೆ ಕಾರ್ಮಾಡು ಮುಖ್ಯ ರಸ್ತೆಯಿಂದ ಪ್ರಾರಂಭವಾಗುತ್ತದೆ ಎಂದರೆ ಸರಿಯಲ್ಲ. ನಿಟ್ಟೂರು ಜಾಗಲೆ ರಸ್ತೆಯಿಂದ ಕಡಂಗ ಪ್ರಾರಂಭವಾಗುತ್ತದೆ ಎನ್ನುತ್ತಾರೆ. ಸಾಕ್ಷಿಯು ನಕಾಶೆಯನ್ನು ಅಂದರೆ ನಿ ಪಿ 8 ಅನ್ನು ನೋಡಿ ಕಡಂಗ ಬಾಳೆಲೆ ಕಾರ್ಮಾಡು ಮುಖ್ಯ ರಸ್ತೆಯಿಂದ ಪ್ರಾರಂಭವಾಗುತ್ತದೆ ಎನ್ನುತ್ತಾರೆ. ಚೀರಂಡ ಕುಟುಂಬದವರು ತಮ್ಮ ಆಸ್ತಿಗೆ ಹೋಗಲು ಕಡಂಗದಲ್ಲಿ ಸುಮಾರು 50 ಅಡಿ ದೂರ ರಸ್ತೆ ಮಾಡಿದ್ದಾರೆ ಎನ್ನುತಾರೆ. ಸದರಿ ರಸ್ತೆಯನ್ನು ಚೀರಂಡ ಕುಟುಂಬದವರು ತಮ್ಮ ಆಸ್ತಿಗೆ ಹೋಗಲು

ಈಗಲೂ ಬಳಸುತ್ತಾರೆ ಎಂದರೆ ಸರಿ. ಚೀರಂಡ ಕುಟುಂಬದವರು ಬಳುತ್ತಿರುವ 50 ಅಡಿ ದೂರದ ರಸ್ತೆಯನ್ನು ಮುಂದಕ್ಕೆ ಕಡಂಗದಲ್ಲಿ ಮುಂದುವರೆಸಿದರೆ ನಮ್ಮ ಮನೆ ಹಾಗೂ ಕೆರೆಗೆ ಅಂದರೆ ಸರ್ವೆ ನಂ 77/16, ಹಾಗೂ ಸರ್ವೆ ನಂ 77/17 ತಲುಪಬಹುದು ಎಂದರೆ ಅಷ್ಟು ದೂರ ರಸ್ತೆ ಮಾಡಲಾಗುವುದಿಲ್ಲ ಎನ್ನುತ್ತಾರೆ. ಕಡಂಗ ಸರ್ವೆ ನಂ 77/16 , ಸರ್ವೆ ನಂ 77/17 ರ ತನಕ ಇದೆ ಎಂದರೆ  ಸರಿ.

ನಮ್ಮ ಕುಟುಂಬದ ಅಂದರೆ ಸಹೋದರರ ಆಸ್ತಿ ಹಾಗೂ ಚೀರಂಡ ಕುಟುಂಬದವರ ಆಸ್ತಿ ಹೊಂದಿಕೊಂಡಂತೆ ಇದೆ ಎಂದರೆ ಸರಿ. ಕಡಂಗ ನಮ್ಮ ಕುಟುಂಬದ ಜಾಗಕ್ಕಾಗಿ ಇದೆ ಎಂದರೆ ಸರಿ, ಸಾಕ್ಷಿ  ಮುಂದುವರೆದು ಮಾಪಂಗಡ ಕುಟುಂಬದ ಆಸ್ತಿ ಹಾಗೂ ಮಚ್ಚಮಾಡ ಕುಟುಂಬದ ಆಸ್ತಿಗೂ ಸಹ ಕಡಂಗ ಮುಂದುವರೆದಿದೆ ಎನ್ನುತ್ತಾರೆ. ನಮ್ಮ ಕುಟುಂಬದವರು ತೋಟ ಇರುವ ಕಡೆ ಕಡಂಗವನ್ನು 60 ವರ್ಷದ ಹಿಂದೆ ತೋಟ ಮಾಡಿದ್ದಾರೆ  ಎನ್ನುತ್ತಾರೆ. ನನ್ನ ಅಣ್ಣಂದಿರು ಅಂದರೆ ಪ್ರತಿವಾದಿ 1 ಮತ್ತು 6 ಹಾಗೂ ನನ್ನ ಮೃತ ಸಹೋದರ  ಸದರಿ ಕಡಂಗವನ್ನು ತೋಟವಾಗಿ ಮಾಡಿದ್ದಾರೆ ಎನ್ನುತ್ತಾರೆ. ಯಾವ ವರ್ಷದಲ್ಲಿ ಕಡಂಗವನ್ನು ತೋಟವನ್ನಾಗಿ ಮಾಡಿದ್ದಾರೆ ಎಂದು ಹೇಳಲಾಗುದಿಲ್ಲ ನಾನು ಆಗ ಚಿಕ್ಕವನಿದ್ದೆ ಎನ್ನುತ್ತಾರೆ. ನನ್ನ ಕುಟುಂಬದವರು 2018 ರಲ್ಲಿ ಕಡಂಗವನ್ನು ಒತ್ತುವರಿ ಮಾಡಿ ತೋಟ ಮಾಡಿದ್ದಾರೆ ಎಂದರೆ ಸರಿಯಲ್ಲ. 2018 ಕ್ಕಿಂತ ಮೊದಲು ಸದರಿ ಕಡಂಗ ರಸ್ತೆ ಆಗಿತ್ತು ಎಂದರೆ ಸರಿಯಲ್ಲ. ನಾನು ದಾವೆಗೆ ಸಹಾಯವಾಗಲೀ ಎಂದು 60 ವರ್ಷದ ಹಿಂದೆ ಕಡಂಗವನ್ನು ತೋಟವನ್ನಾಗಿ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಈ ದಾವೆಯಲ್ಲಿ ಯಾವುದೇ ಪರಿಹಾರ ಕೇಳಿಲ್ಲ ಎನ್ನುತ್ತಾರೆ. ವಾದಿಯವರ ಸರ್ವೆ ನಂ ಆಸ್ತಿ, ನಿಟ್ಟೂರು, ಜಾಗಲೆ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇದೆ ಎನ್ನುತ್ತಾರೆ. ದಾವಾ ಸ್ವತ್ತುಗಳು ಈ ದಾವೆ ಸಲ್ಲಿಸಿದ ಸಮಯದಲ್ಲಿ ವಾದಿಯವರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಟ್ಟೂರು, ಜಾಗಲೆ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ವಾದಿಯ ಆಸ್ತಿಯ ಸರ್ವೆ ನಂ ನನಗೆ ಗೊತ್ತಿಲ್ಲ. ಸರ್ವೆ ನಂ 77/17 ರಲ್ಲಿ ನಮ್ಮ ಮನೆ ಮತ್ತು ಆಸ್ತಿಗೆ ನಾವು ಈಗ  ನಿಟ್ಟೂರು, ಜಾಗಲೆ ಮುಖ್ಯ ರಸ್ತೆಯಿಂದ ಹೋಗಿ ಒಳಗಡೆ ಇರುವ ಸಾರ್ವಜನಿಕ ರಸ್ತೆ ಮೂಲಕ ಹೋಗುತ್ತಿದ್ದೇವೆ. ಸದರಿ ಸಾರ್ವಜನಿಕ ರಸ್ತೆ ನಿಟ್ಟೂರು ಗ್ರಾಮ ನಕಾಶೆಯಲ್ಲಿ ನಮೂದಾಗಿದೆ ಎನ್ನುತ್ತಾರೆ.  ನಾನು ಹೇಳಿದಂತೆ ಸಾರ್ವಜನಿಕ ರಸ್ತೆ ನಿಟ್ಟೂರು ಗ್ರಾಮ ನಕಾಶೆಯಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿ ಪಿ 8 ಗ್ರಾಮ ನಕಾಶೆಯಲ್ಲಿ ಸಾರ್ವಜನಿಕ ರಸ್ತೆ ವಾದಿಯವರ ಆಸ್ತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ.  ದಾವೆಗೆ ಸಹಾಯವಾಲೀ ಎಂದು ಸಾರ್ವಜನಿಕ ರಸ್ತೆ ನಿ ಪಿ 8 ಗ್ರಾಮ ನಕಾಶೆಯಲ್ಲಿ  ನಮೂದಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಟ್ಟೂರು, ಜಾಗಲೆ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ವಾದಿಯವರ ಆಸ್ತಿಯವರು ಅವರು ಕಾಫಿ, ಅಡಿಕೆ, ಕರಿಮೆಣಸು, ಸಿಲ್ವರ್ ಮರ ಬೆಳೆಸಿದ್ದಾರೆ ಎಂದರೆ ಇರಬಹುದು ಎನ್ನುತ್ತಾರೆ. ವಾದಿಯವರು ತೋಟದಲ್ಲಿದರು ಕಾಫಿ ಬೆಳೆ ಸುಮಾರು 60 ವರ್ಷದ್ದು ಎಂದರೆ ಸರಿಯಲ್ಲ, ಸುಮಾರು 30 ವರ್ಷದ್ದು ಎನ್ನುತ್ತಾರೆ. ವಾದಿಗಿಂತ ಮೊದಲು ಅವರ ಅಜ್ಜ ಹಾಗೂ ತಂದೆ ಸದರಿ ತೋಟದ ಸ್ವಾ ಧೀನದಲ್ಲಿದ್ದರು ಅಂದರೆ ರಸ್ತೆಯನ್ನು ಹೊರತುಪಡಿಸಿ ಸ್ವಾಧೀನದಲ್ಲಿದ್ದರು ಎನ್ನುತ್ತಾರೆ. ವಾದಿಯವರು ತಂದೆ ತೋಟ ಮಾಡಿದ್ದಾರೆ ಎನ್ನುತ್ತಾರೆ. ವಾದಿಯವರ ತೋಟದ ಮಧ್ಯದಲ್ಲಿ ಒಂದು ರಸ್ತೆ ಇದೆ ಎಂದರೆ ಸರಿ. ಕೊಡಗಿನಲ್ಲಿ ಸಾಮಾನ್ಯವಾಗಿ ಕಾಫಿ ತೋಟ ಮಾಡುವಾಗ ಅದರಲ್ಲಿ ಗೊಬ್ಬರ ಹಾಗೂ ಸರಕುಗಳನ್ನು ಸಾಗಾಣೆ ಮಾಡಲು ರಸ್ತೆ ಮಾಡುತ್ತಾರೆ ಎಂದರೆ ಸರಿ. ನನ್ನ ತೋಟದಲ್ಲೂ ಸಹ ಆ ರೀತಿ ರಸ್ತೆ ಇದೆ ಎನ್ನುತ್ತಾರೆ. ಆ ರೀತಿ ರಸ್ತೆ ಮಾಡಿಕೊಳ್ಳದೆ ಸಾಗುವಳಿ ಮಾಡಿಕೊಳ್ಳಲು ಆಗುವುದಿಲ್ಲ ಎಂದರೆ ಸರಿ.

ಜಾಗಲೆ ರಸ್ತೆಗೆ ಹೊಂದಿಕೊಂಡಂತೆ ನನ್ನ ಅಣ್ಣ ಪ್ರತಿವಾದಿ 4, ಸುಬ್ಬಯ್ಯನವರ ಆಸ್ತಿ ಇದೆ, ಅದರ ಸರ್ವೆ ನಂ ನನಗೆ ಗೊತ್ತಿಲ್ಲ. ಸರ್ಕಾರಿ ಪೈಸಾರಿ ಕೆರೆ ಸರ್ವೆ 77/16 ರಲ್ಲಿ ಇದ್ದು ಅದಕ್ಕೆ ಸಾರ್ವಜನಿಕರು ಸರ್ವೆ 99 ರ ಕಡಂಗದ ಮೂಲಕ ಬರುತ್ತಿದ್ದರು ಎಂದರೆ ಸರಿಯಲ್ಲ. ಬಾಳೆಲೆ ಕಾರ್ಮಾಡು ಮುಖ್ಯ ರಸ್ತೆಗೆ ಒತ್ತಾಗಿರುವ ಕಡಂಗಕ್ಕಾಗಿ ಹಾಗೂ ಪೈಸಾರಿ ಕೆರೆಗೆ ಸಾರ್ವಜನಿಕರು ಕಡಂಗ ಮೂಲಕ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಲಾಗಿ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.